**ಪಿ.ಡಬ್ಲ್ಯು-03 –ಕರಿಯಯ್ಯ**

**ಸಾಕ್ಷಿಯನ್ನು ದಿನಾಂಕಃ 26.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಬಿ.ಎಸ್.ಎಸ್. ವಕೀಲರಿಂದಃ**

ನನ್ನ ಸ್ವಂತ ಊರು ಚಂಗೋಡನಹಳ್ಳಿ ಎಂದರೆ ಸರಿ. ಅದು ನುಗು ಜಲಾಶಯದಿಂದ ಪೂರ್ವ ದಿಕ್ಕಿಗೆ ಇರುತ್ತದೆಂದರೆ ಸರಿ. ಹೆಚ್.ಡಿ.ಕೋಟೆ ಹ್ಯಾಂಡ್ ಪೋಸ್ಟ್ ನಿಂದ ನಮ್ಮ ಊರಿಗೆ ಸುಮಾರು 21 ಕಿ.ಮೀ. ಅಂತರವಿರುತ್ತದೆ ಎಂದರೆ ಸರಿ. ವಾದಿ ನನಗೆ ಯಾವುದೇ ಸಂಬಂಧಿಯಾಗಿರುವುದಿಲ್ಲ. ನನಗೆ ಆನಗಟ್ಟೆ ಗ್ರಾಮದಲ್ಲಿ ಯಾರೂ ಸಂಬಂಧಿಕಾರು ಇರುವುದಿಲ್ಲ. ನಾನು ಮುಖ್ಯ ವಿಚಾರಣೆಯ ಬದಲಾಗಿ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ವಾದಿ ಹೂಡಿರುವ ಈ ದಾವೆಯ ದಾವಾ ಆಸ್ತಿ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿಯ ವಿಸ್ತೀರ್ಣ ಪೂರ್ವ–ಪಶ್ಚಿಮಃ ಸುಮಾರು 24 ಅಡಿ ಮತ್ತು ಉತ್ತರ–ದಕ್ಷಿಣಃ ಸುಮಾರು 80 ಅಡಿ ಇರಬಹುದು. ಕ್ರಯ ಪತ್ರದಲ್ಲಿ ಸದರಿ ಆಸ್ತಿಯ ವಿಸ್ತೀರ್ಣ ಎಷ್ಟು ನಮೂದಿಸಲಾಗಿದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ವಾದಿಯು ನನ್ನಲ್ಲಿ ಕ್ರಯ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿಸಿದ್ದರಿಂದ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳುವಂತೆ ಕರೆದಿದ್ದರಿಂದ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆಂದರೆ ಸರಿ. ವಾದಿ ಈ ದಾವೆಯನ್ನು ದಾವಾ ಆಸ್ತಿ ತನಗೆ ಸೇರಬೇಕೆಂದು ಹೂಡಿರುತ್ತಾರೆ. ಕ್ರಯ ಪತ್ರಕ್ಕೆ ಸಹಿಯನ್ನು ಮಾಡಿದ್ದರ ಹೊರತಾಗಿ ನನಗೆ ದಾವಾ ಆಸ್ತಿಯ ಬಗ್ಗೆ ಬೇರ್ಯಾವ ವಿಚಾರ ಗೊತ್ತಿರುವುದಿಲ್ಲ, ಬದಲಾಗಿ ವಾದಿಯ ಮಾತನ್ನು ಕೇಳಿಕೊಂಡು ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**